ಕ್ರ.ಸಂ	ತಾಲ್ಲೂಕು ಹೆಸರು	ಸಾಲಮನ್ನಾ ಯೋಜನೆಯಲ್ಲಿ ಮನ್ನಾ ಆದ ವಿವರ(ರೂ.ಲಕ್ಷಗಳಲ್ಲಿ)	
		ಸಂಖ್ಯೆ	ಮೊತ್ತ
1.	ಮುಳಬಾಗಿಲು	303	68.22
2.	ಗೌರಿಬಿದನೂರು	374	78.08
3.	ಬಾಗೇಪಲ್ಲಿ	258	37.29
4.	ಚಿಂತಾಮಣಿ	250	49.44
5.	ಬಂಗಾರಪೇಟೆ	425	99.51
6.	ಗುಡಿಬಂಡೆ	102	15.02
7.	ಶಿಡ್ಲಘಟ್ಟ	100	21.35
8.	ಕೆ.ಜಿ.ಎಫ್	41	9.20
9.	ಚಿಕ್ಕಬಳ್ಳಾಪುರ	38	7.53
10.	ಮಾಲೂರು	75	16.47
11.	ಕೋಲಾರ	18	3.69
	ಒಟ್ಟು		**405.70**

236(118) ಶ್ರೀ ಶಿಶಂಕರ ರೆಡ್ಡಿ ಎನ್.ಹೆಚ್. (ಗೌರಿ ಬಿದನೂರು)

ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಲಿಗೆ ಉತ್ತರಿಸುವರೇ?

ಅ) ಗೌರಿ ಬಿದನೂರು ತಾಲ್ಲೂಕಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಯೋಜನೆಯಡಿಯಲ್ಲಿ ಶೇಕಡ 100 ರಷ್ಟು ಸಹಾಯಧನ ಪಡೆದ ರೈತರೆಷ್ಟು? (ವಿವರ ಒದಗಿಸುವುದು)

ಆ) ಬಹಳ ಜನ ರೈತರು ಸಹಾಯ ಧನ ಕೋರಿ ಅರ್ಜಿ ಸಲ್ಲಿಸಿದ್ದರೂ ಸಹ ಸಹಾಯಧನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಇ)ಬಂದಿದ್ದಲ್ಲಿ ಸಹಯಧನ ಒದಗಿಸದಿರಲು ಕಾರಣವೇನು?

ಈ) ಸಹಾಯಧನ ಕೋರಿರುವ ರೈತರ ಬಾಕಿ ಉಳಿದಿರುವ ಕಡತಗಳ ಸಳಖ್ಯೆ ಎಷ್ಟು?

ಉ) ಈ ಎಲ್ಲಕ್ಕೂ ಸಹಾಯಧನ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಶಶಿಕಾಂತ ಅ ನಾಯಿಕ

ಅ) 2006–07 ನೇ ಸಾಲಿನಲ್ಲಿ ಗೌರಿಬಿದನೂರಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಶೇಕಡ 100 ರಷ್ಟು ಸಹಯಧನ ಪಡೆದ ರೈತರ ಸಂಖ್ಯೆ 10. ವಿವರಗಳು ಈ ಕೆಳಕಂಡಂತಿವೆ.

1. ಗಂಗರಾಜಯ್ಯ ಬಿನ್ ಸಿದ್ದಲಿಂಗಯ್ಯ, ಅರಸಾಲು ಬಂಡೆ
2. ನಾರಾಯಣಪ್ಪ ಬಿನ್ ಸಿದ್ದಲಿಂಗಯ್ಯ, ಅರಸಾಲು ಬಂಡೆ
3. ಸೌಭಾಗ್ಯ ಲಕ್ಷ್ಮಿ, ಕೋ ವೀರಯ್ಯ, ಬೇವಿನ ಹಳ್ಳಿ
4. ಐ ವೀರಯ್ಯ, ಬಿನ್ ವೇಣುಗೋಪಾಲ್ ರಾವ್ ಬೇವಿನ ಹಳ್ಳಿ
5. ಜಿ.ಕೆ. ಚೆನ್ನಿಗರಾಯಪ್ಪ, ಬಿನ್ ಚಿಕ್ಕ ಕರಿಯಣ್ಣ, ಸಿಮಗನ ಹಳ್ಳಿ,
6. ನರಸಿಂಹಪ್ಪ, ಬಿನ್ ಚಿಕ್ಕ ನರಸಿಂಹಪ್ಪ, ಅದ್ದೆಕೊಪ್ಪ
7. ಕೆ.ಎನ್ ಚಂದ್ರಶೇಖರ ರೆಡ್ಡಿ, ಬಿನ್ ವೇಮ ರೆಡ್ಡಿ ಮಾಕಾರಲ ಹಳ್ಳಿ
8. ಎ. ಜಯಲಕ್ಷಮ್ಮ, ಕೋ ನಂದಗೋಪಾಲ, ಬಂದಾರಲ ಹಳ್ಳಿ
9. ಟಿ. ಜಯರಾಮ ರೆಡ್ಡಿ, ಬಿನ್ ತಮ್ಮಾರೆಡ್ಡಿ, ಮರಳೂರು
10. ಮುನಿನಂಜಮ್ಮ, ಕೋಂ ದೊಡ್ಡ ಸಂಜೀವಪ್ಪ, ಇಡಗೂರು

ಆ) ಹೌದು, ಸಹಾಯಧನ ಕೋರಿ ಸಲ್ಲಿಸಿರುವ 126 ಅರ್ಜಿಗಳು ಯೋಜನೆಯ ಮಾರ್ಗಸೂಚಿಯನ್ವಯ ಅಗತ್ಯ ದಾಖಲಾತಿಳಾದ ಪಹಣಿ,ಚೆಕ್ಕಬಂದಿ, ಗಿಡಗಳ ಸರಿಯಾದ ಸಂಖ್ಯೆ ಮುಂತಾದವುಗಳನ್ನು ಒದಗಿಸದಿರುವ ಕಲಾರಣದಿಂದ ಸಹಾಯಧನ ನೀಡಲಾಗಿರುವುದಿಲ್ಲ.

ಇ) ಮೇಲಿನ "ಆ" ನಲ್ಲಿ ಉತ್ತರಿಸಲಾಗಿದೆ.

ಈ) ಮೇಲಿನ "ಆ" ನಲ್ಲಿ ಉತ್ತರಿಸಲಾಗಿದೆ.

ಉ) 2007–08 ನೇ ಸಾಲಿನಲ್ಲಿ ರಾಜ್ಯಕ್ಕೆ ಒಟ್ಟಾರೆ ರೂ 40.89 ಕೋಟಿಗಳಿಗೆ ಅನುದಾನ ಕೋರಿ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುಮೋದನೆಯನ್ನು ಈಗಾಗಲೇ ತಿಳಿಸಿರುತ್ತಾರೆ. ಮತ್ತು ಅನುದಾನವನ್ನು ಇನ್ನೂ ಬಿಡುಗಡೆ ಮಾಡಬೇಕಾಗಿದೆ. ಅನುದಾನ ದೊರೆತ ತಕ್ಷಣ ಎಲ್ಲಾ ಅರ್ಹ ಬಾಕಿ ಅರ್ಜಿಗಳನ್ನು ಇತ್ಯರ್ಥಪಡಿಸಲಾಗುವುದು.

238(566) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಜಮಖಂಡಿ ತಾಲ್ಲುಕಿನಲ್ಲಿ ಒಟ್ಟು ಕೃಷಿಗೆ ಯೋಗ್ಯವಾದ ಜಮೀನು ಎಷ್ಟು?

ಆ) ಈ ಜಮೀನಿನಲ್ಲಿ ಸವಳು–ಜವಳು ಬಂಜರಾದ ಜಮೀನು ಎಷ್ಟು?

ಇ) ಪ್ರತಿವರ್ಷ ಎಷ್ಟು ಭೂಮಿ ಈ ಪ್ರಕಾರ ಹಾಳಾಗುತ್ತಿದೆ?

ಈ) ಸವಳು–ಜವಳು ತೆಗೆದು ಕೃಷಿ ಯೋಗ್ಯವಾದ ಭೂಮಿ ತಯಾರಿಸಲು ಹಾಗೂ ಸವಲು–ಜವಳು ಕಡಿಮೆಮಾಡಲು ಯಾವ ಕೃಷಿ ಕೈಗೊಳ್ಳಲಾಗಿದೆ?